# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ 2021-22ನೇ ಸಾಲಿನ ತರಬೇತಿ ಕಾರ್ಯಕ್ರಮಗಳನ್ನು ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಆಯೋಜಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 538 ಸಅಸೇ 2007, ದಿನಾಂಕ: 13-03-2008.

2) ಸರ್ಕಾರದ ಆದೇಶ ಸಂಖ್ಯೆ: ಸಾಉಇ 42 ಎಆರ್‌ಯು 2021, ದಿನಾಂಕ: 20.04.2021.

3) ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ದಿನಾಂಕ: 18.10.2021 ರ ಸಭಾ ನಡವಳಿ ಸಂ.ಸಾಉಇ 33 ಎಆರ್‌ಯು 2021.

****

**ಪ್ರಸ್ತಾವನೆ:**

ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ರಾಜ್ಯದ ಸಾರ್ವಜನಿಕ ಉದ್ದಿಮೆಗಳ ಉದ್ಯೋಗಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಮೇಲೆ(1)ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ವಿವಿಧ ವಿಷಯ ಪರಿಣತ ಬಾಹ್ಯ ಸಂಸ್ಥೆಗಳ ಮೂಲಕ ತರಬೇತಿಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ.

ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ 2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3451-00-091-0-02-059 ರಲ್ಲಿ ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಉದ್ಯೋಗಿಗಳ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ರೂ.100.00 ಲಕ್ಷ (ರೂಪಾಯಿ ಒಂದು ನೂರು ಲಕ್ಷ ಮಾತ್ರ) ಗಳನ್ನು ನಿಗದಿಪಡಿಸಲಾಗಿದೆ.

ಮೇಲೆ ಓದಲಾದ (3)ರ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಆನ್-ಲೈನ್ ಸಭೆಯಲ್ಲಿ 5 ವಿವಿಧ ಪರಿಣತ ಬಾಹ್ಯ ಸಂಸ್ಥೆಗಳ ಮುಖ್ಯಸ್ಥರುಗಳು ಭಾಗವಹಿಸಿ, ಆಯೋಜಿಸಬಹುದಾದ ತರಬೇತಿಗಳ ಬಗ್ಗೆ ಚರ್ಚಿಸಿ, ರಾಜ್ಯದ ಸಾರ್ವಜನಿಕ ಉದ್ದಿಮೆಗಳ ವಿವಿಧ ಸ್ಥರದ ಅಧಿಕಾರಿ/ಸಿಬ್ಬಂದಿಗಳಿಗೆ ನೀಡಬಹುದಾದ ತರಬೇತಿಗಳನ್ನು ವಿವರಿಸಿ ಅಂತಿಮಗೊಳಿಸುವಂತೆ ಸೂಚಿಸಲಾಗಿದೆ.

ಅದರಂತೆ, ಸಾರ್ವಜನಿಕ ಉದ್ದಿಮೆಗಳ ಇಲಾಖೆಯು, ಈ ಸಂಸ್ಥೆಗಳ ಪರಿಣತ/ಅಧಿಕಾರಿಗಳೊಂದಿಗೆ ಚರ್ಚಿಸಿ, 2021-22ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಅಧಿಕಾರಿ/ನೌಕರರಿಗೆ ಆನ್-ಲೈನ್ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಾಉಇ 33 ಎಆರ್ ಯು 2021, ಬೆಂಗಳೂರು,**

**ದಿನಾಂಕ: 11-11-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನಲ್ಲಿ ರಾಜ್ಯದ ಸಾರ್ವಜನಿಕ ಉದ್ದಿಮೆಗಳ ಅಧಿಕಾರಿ/ನೌಕರರಿಗೆ ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿರುವ ವಿವರಗಳಂತೆ ಆನ್-ಲೈನ್ ತರಬೇತಿಯನ್ನು ಆಯೋಜಿಸಲು ಸರ್ಕಾರವು ಮಂಜೂರಾತಿ ನೀಡಿದೆ.

ಸದರಿ ತರಬೇತಿಗಳಿಗೆ ಆಗುವ ವೆಚ್ಚವನ್ನು ಲೆಕ್ಕಶೀರ್ಷಿಕೆ "3451-00-091-0-02-059" ರಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

ಎನ್.ಶಾರದಾಂಬ 11/11/2021

(ಎನ್.ಶಾರದಾಂಬ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ)
ಸಾರ್ವಜನಿಕ ಉದ್ದಿಮೆಗಳ ಇಲಾಖೆ

ಇವರಿಗೆ:

1) ಪ್ರಧಾನ ಮಹಾಲೇಖಪಾಲರು(ಎ&ಇ), ಬೆಂಗಳೂರು.
2) ಆಡಳಿತ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು /ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3) ವ್ಯವಸ್ಥಾಪಕ ನಿರ್ದೇಶಕರುಗಳು, 60 ಸಾರ್ವಜನಿಕ ಉದ್ದಿಮೆಗಳು.
4) ನಿರ್ದೇಶಕರು, ಸೆಂಟರ್ ಫಾರ್ ಎಂಟರ್‌ಪ್ರೆನ್ಯೂರ್‌ಶಿಪ್ ಡೆವಲಪ್‌ಮೆಂಟ್ ಆಫ್ ಕರ್ನಾಟಕ(CEDOK), ಧಾರವಾಡ.
5) ಪ್ರಾಂತೀಯ ನಿರ್ದೇಶಕರು, ನ್ಯಾಷನಲ್ ಪ್ರಾಡಕ್ಟಿವಿಟಿ ಕೌನ್ಸಿಲ್ (NPC), ಬೆಂಗಳೂರು.

6) ಕಾರ್ಯದರ್ಶಿ, ಭಾರತೀಯ ವೆಚ್ಚ ಲೆಕ್ಕಿಗರ ಸಂಸ್ಥೆ (ICAI), ಬೆಂಗಳೂರು.

7) ನಿರ್ದೇಶಕರು, ಪಬ್ಲಿಕ್ ಅಫೇರ್ಸ್ ಫೌಂಡೇಶನ್ (PAF), ಬೆಂಗಳೂರು.

8) ಹಿರಿಯ ವ್ಯವಸ್ಥಾಪಕರು, ಗ್ರೀನ್ ಸ್ಕಿಲ್ಸ್ ಅಕಾಡೆಮಿ (ಸೆಂಟರ್ ಫಾರ್ ಸಸ್ಟೈನಬಲ್ ಡೆವಲಪ್‌ಮೆಂಟ್ (CSD), ಬೆಂಗಳೂರು.

9) ಸರ್ಕಾರದ ಅಧೀನ ಕಾರ್ಯದರ್ಶಿ(ವೆಚ್ಚ-1 ಮತ್ತು ಬಂಡವಾಳ ಹೂಡಿಕೆ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

10) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ.

11) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಾರ್ವಜನಿಕ ಉದ್ದಿಮೆಗಳ ಇಲಾಖೆ.

12) ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ), ಸಾರ್ವಜನಿಕ ಉದ್ದಿಮೆಗಳ ಇಲಾಖೆ.

13) ಹೆಚ್ಚುವರು ಪ್ರತಿಗಳು/ಶಾಖಾ ರಕ್ಷಾ ಕಡತ.

ಅನುಬಂಧ-1

## PROPOSED ONLINE TRAINING PROGRAMMES AND INSTITUTES FOR CONDUCTING TRAINING FOR THE YEAR 2021-22

| Sl No. | NAME OF THE INSTITUTE | SUBJECT TITLE | LEVEL OF PARTICIPANTS | DATE OF TRAINING |
|---|---|---|---|---|
| 1 | National Productivity Council, Bangalore(NPC) | • Procurement Management through Government e-market place (GEM) | Middle & Senior management | 24 & 25.11.2021 |
| | | • Preventive Vigilance for Public Sector Undertaking | | 20 & 21.12.2021 |
| 2 | Centre for Entrepreneurship Development of Karnataka, Dharwad(CEDOK) | • Exploring the miracle of Power of Mind, Incorporating Positive Attitude and Converting Weakness to Strength | Senior and Middle level executives | 06.12.21 to 08.12.2021 |
| | | • Tolerance of Change and Uncertainty | All level executives | 27.12.21 to 29.12.2021 |
| 3 | Centre for Sustainable Development(CSD) | • Contract Management | All levels executives | 29 &30.11.2021 |
| | | • Corporate Sustainability | Senior and Middle level executives | 13 & 14.12.2021 |
| 4 | Public Affairs Foundation, Bangalore(PAF) | • Building Strong Middle-Senior Management | Senior and Middle level executives | 01 & 02.12.2021 |
| | | • Resilience during Uncertainty and Risk | All levels executives | 03 & 04.01.2022 |
| | | • Data Analytics for Governance | Senior and Middle level executives | 10 & 11.01.2022 |
| 5 | The Institute of Cost Accountants of India, Bangalore(ICAI) | • Maintenance of Statutory Records, New Developments as per Companies Act | All level executives | 16 & 17.12.2021 |
| | | • Big Data-Uses and analysis | All level executives | 05 & 06.01.2022 |

ಎನ್. ಶಿವಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ)
ಸಾರ್ವಜನಿಕ ಉದ್ದಿಮೆಗಳ ಇಲಾಖೆ

(egov-con7@karnataka.gov.in)